**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

<u>ಸೆಷನ್ಸ್ ಕೇಸ್ ನಂಃ 3/2021</u> <u>ಪಿ.ಡಬ್ಲ್ಯೂಃ 1</u>

<u>ಸಿ.ಡಬ್ಲ್ಯೂಃ 1</u>

| | |
|---|---|
| ಸಾಕ್ಷಿದಾರರ ಹೆಸರು | ಅಮೀರ್ ಸುಹೇಲ್ |
| ತಂದೆಯ ಹೆಸರು | ಇಬ್ರಾಹಿಂ ಖಲೀಲ್ |
| ವಯಸ್ಸು | 30 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಹೆಜಮಾಡಿ, ಪಡುಬಿದ್ರೆ |

ದಿನಾಂಕಃ 05-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು ಹೆಜಮಾಡಿಯಲ್ಲಿ ಸೌತ್ ಸುಲ್ತಾನ್ ರಸ್ತೆಯಲ್ಲಿ ವಾಸವಾಗಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರಿಬ್ಬರನ್ನು ನೋಡಿ ಪರಿಚಯ. ಹೆಸರು ಗೊತ್ತಿಲ್ಲ. ಮೃತ ಸದಾಕತ್ ಅನ್ಸಾರಿ ಇವರನ್ನೂ ಸಹ ನೋಡಿ ಗೊತ್ತು. 1 ನೇ ಆರೋಪಿ ಮೃತ ಸದಾಕತ್ ಅನ್ಸಾರಿ ಈತನ ಹೆಂಡತಿ. 2 ನೇ ಆರೋಪಿ ಮೃತನ ತಮ್ಮ. ಅರೋಪಿತರು ಮೂಲತಃ ಜಾರ್ಖಂಡನವರು. ಅವರು ಟೈಲ್ಸ ಕೆಲಸ ಮಾಡಲು ಹೆಜಮಾಡಿಗೆ ಬಂದಿದ್ದರು. ಅವರು ಕರ್ನಿರೆ ಮಸೀದಿಗೆ ಸಂಬಂಧಪಟ್ಟ ಕಟ್ಟಡದಲ್ಲಿ ಬಾಡಿಗೆಗೆ ವಾಸವಾಗಿದ್ದರು. ಅವರೊಂದಿಗೆ ಅವನ ನಾಲ್ಕು ಮಕ್ಕಳು ಸಹ ಇದ್ದರು. 2 ನೇ ಅರೋಪಿ ಸಹ ಅವರೊಂದಿಗೆ ವಾಸವಾಗಿದ್ದ. ಮೃತನು ಮತ್ತು 2 ನೇ ಆರೋಪಿ ಗಾರೆ ಮತ್ತು ಟೈಲ್ಸ ಕೆಲಸ ಮಾಡಿಕೊಂಡಿದ್ದರು.

2) ದಿನಾಂಕ 21-05-2020 ರಂದು ರಮ್ಜಾನ್ ಉಪವಾಸ ನಿಮಿತ್ತ ಮಸೀದಿಗೆ ಹೋಗಿದ್ದೆ. ನಾನು ಕನ್ನಂಗಾರು ಮಸೀದಿಗೆ ಹೋಗಿ ಪ್ರಾರ್ಥನೆ ಮಾಡಿ ವಾಪಾಸು ಬರುತ್ತಿದ್ದಾಗ ರಾತ್ರಿ ಸುಮಾರು 12-30 ಗಂಟೆ ಸಮಯದಲ್ಲಿ ಮನೆಗೆ ಬರುತ್ತಿದ್ದೆ. ಆಗ ಆರೋಪಿತರ ಮನೆಯ ಬಳಿಯಲ್ಲಿ ನನ್ನ ಚಿಕ್ಕಮ್ಮ ಸಹ ವಾಸವಾಗಿದ್ದರು. ಅವರ

ಮನೆಯ ಬಳಿ ಬರುತ್ತಿದ್ದಾಗ, ಕಪ್ಪು ಬಣ್ಣದ ಸ್ಕೂಟಿಯಲ್ಲಿ ಮೂರು ಜನ ಕಟ್ಟಡದಿಂದ ಹೊರಗೆ ಬರುತ್ತಿದ್ದರು. ಮಧ್ಯದಲ್ಲಿ ಇದ್ದವರು ಅಸೌಖ್ಯದ ರೀತಿಯಲ್ಲಿ ಇದ್ದರು. ಸ್ಕೂಟರ್ ನ್ನು ಒಬ್ಬ ಗಂಡಸು ಚಲಾಯಿಸುತ್ತಿದ್ದು, ಹಿಂಬದಿಯಲ್ಲಿ ಒಬ್ಬ ಹೆಂಗಸು ಕುಳಿತ್ತಿದ್ದಳು, ಮಧ್ಯದಲ್ಲಿ ಅಸೌಖ್ಯವಿದ್ದ ತಲೆಗೆ ಶಾಲ್ ಸುತ್ತಿದ್ದ ಚಂಡು ಬದಿಗೆ ವಾಲಿದ್ದ ವ್ಯಕ್ತಿಯಾಗಿದ್ದ. ನಾನು ಆಗ ಬೈಕ್ ನಲ್ಲಿದ್ದೆ.

3) ಮಾರನೇ ದಿನ ನನ್ನ ಚಿಕ್ಕಮ್ಮನ ಮನೆಯ ಪಕ್ಕದವರ ಮನೆಯಲ್ಲಿ ಸಾವು ಆಗಿರುವುದಾಗಿ ತಿಳಿದಿತ್ತು. ಆ ಸಾವು ಅಪಘಾತದಲ್ಲಿ ಆಗಿರುವುದಾಗಿ ತಿಳಿದಿತ್ತು. ಆಗ ಅಪಘಾತದಲ್ಲಿ ತೀರಿದ್ದ ವ್ಯಕ್ತಿ 2 ನೇ ಅರೋಪಿಯ ಅಣ್ಣನೆಂದು ತಿಳಿದಿತ್ತು. ನಂತರ ವಾಟ್ಸಾಪ್ ನಲ್ಲಿ ಹೆಜಮಾಡಿಯ ಗುಂಡಿ ಪಕ್ಕದ ಮೋರಿಯಲ್ಲಿ ಗಾಡಿ ಜಾರಿ ಅಪಘಾತವಾಗಿರುವುದಾಗಿ ತಿಳಿದಿತ್ತು. ಸದರಿ ಅಪಘಾತದ ಬಗ್ಗೆ ಅನುಮಾನ ಇರುವುದಾಗಿ ಪೊಲೀಸರಿಗೆ ಹೇಳಿದ್ದೆ. ನಂತರ ತಾರೀಕು 24 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಅಲ್ಲಿ ಹಿಂದಿನ ದಿನ ರಾತ್ರಿ ನೋಡಿದ್ದ ಕಪ್ಪು ಸ್ಕೂಟಿಯನ್ನು ನೋಡಿ ಗುರುತಿಸಿದ್ದೆ. ಆದಿನ ಠಾಣೆಯಲ್ಲಿ ಆರೋಪಿತರು ಇದ್ದರು. ಆದಿನ ಠಾಣೆಯಲ್ಲಿ ನೋಡಿದ್ದ ಆರೋಪಿತರೇ ಹಿಂದಿನ ದಿನ ರಾತ್ರಿ ಸ್ಕೂಟರ್ ನಲ್ಲಿ ಹೋದಂತಹ ಆರೋಪಿತರು ಇರಬಹುದು ಎಂದು ಪೊಲೀಸರಿಗೆ ಹೇಳಿದ್ದೆ. ನಂತರ ನನಗೆ 1 ನೇ ಅರೋಪಿಯ ಮನೆಯಲ್ಲಿ ಮಕ್ಕಳ ವಿಷಯವಾಗಿ ಮೃತನ ಮತ್ತು 1 ನೇ ಅರೋಪಿಯ ನಡುವೆ ತಂಟೆಯಾಗಿ, 1 ನೇ ಅರೋಪಿ ದೂಡಿದ್ದರಿಂದ ಗೋಡೆಗೆ ಬಿದ್ದಿದ್ದ ಸದಾಕತ್ ಅನ್ಸಾರಿ ತೀರಿದ್ದನೆಂದು, ನಂತರ ಆತನನ್ನು ಆರೋಪಿತರು ಆಕ್ಟೀವಾ ಸ್ಕೂಟರ್ ನಲ್ಲಿ ಹೆಜಮಾಡಿ ಗುಂಡಿ ಕಡೆಗೆ ತೋಡಿಗೆ ಸ್ಕೂಟರ್ ಸಮೇತ ದೂಡಿ ಹಾಕಿದ್ದರೆಂದು ತಿಳಿದಿತ್ತು.

4) ನಾನು ಆದಿನ ಠಾಣೆಯಲ್ಲಿ ನೋಡಿದ ಸ್ಕೂಟಿಯನ್ನು ಈದಿನ ಪೋಟೋದಲ್ಲಿ ನೋಡಿ ಗುರುತಿಸಿದ್ದೇನೆ. ಸದರಿ ಪೋಟೋವನ್ನು ನಿಶಾನೆ ಪಿ-1 ಎಂದು ಗುರುತಿಸಿದ್ದೇನೆ. ಆದಿನ ಸ್ಕೂಟರ್ ನಲ್ಲಿ ಮಧ್ಯದಲ್ಲಿ ಕುಳಿತ್ತಿದ್ದ ವ್ಯಕ್ತಿ ಮೃತ ಸದಾಕತ್ ಅನ್ಸಾರಿ ಆಗಿರಬಹುದು ಎಂದು ನಂತರ ತಿಳಿದಿತ್ತು. ಮೃತನ ಶವವನ್ನು

ನಂತರ ಮಸೀದಿಗೆ ತಂದಾಗ ನಾನು ನೋಡಿದ್ದೆ. ಆತನ ಫೋಟೋವನ್ನು ಈಗ ನೋಡಿ ಗುರುತಿಸಿದ್ದೇನೆ. ಆ ಫೋಟೋವನ್ನು ನಿಶಾನೆ ಪಿ-2 ಎಂದು ಗುರುತಿಸಿದೆ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ದಿನಾಂಕ 24-05-2020 ರಂದು ನಾನು ಪೊಲೀಸರಿಗೆ ಈಗ ಓದಿದ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ಆದಿನ ರಾತ್ರಿಯ 12-30 ಗಂಟೆಗೆ ಹೆಜಮಾಡಿಯ ಎಸ್.ಎಸ್ ರಸ್ತೆಯಲ್ಲಿ ಹೆಜಮಾಡಿ ಕಡೆಗೆ ಕಪ್ಪು ಬಣ್ಣದ ಸ್ಕೂಟರ್ ನಲ್ಲಿ ಮುಂದೆ ಮತ್ತು ಹಿಂದೆ ಇದ್ದ ವ್ಯಕ್ತಿಗಳೆಂದು ಗುರುತಿಸಿದ್ದೆ ಎಂದರೆ ಸರಿಯಲ್ಲ. ಆ ರೀತಿಯ ಅನುಮಾನ ಪಟ್ಟಿದ್ದೆ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-3 ಎಂದು ಗುರುತಿಸಿದೆ. 2 ನೇ ಅರೋಪಿ ಮೃತನ ಸಾವಿನ ಬಗ್ಗೆ ಒಂದು ಸುಳ್ಳು ದೂರು ದಾಖಲಿಸಿದ್ದು ನನಗೆ ತಿಳಿದಿತ್ತು ಎಂದರೆ, ಆ ದೂರು ದಾಖಲಾಗಿದ್ದನ್ನು ಪೊಲೀಸರು ಹೇಳಿದ್ದರು.

2) ಆದಿನ ನಾನು ಆರೋಪಿತರನ್ನು ಗುರುತಿಸಿದ್ದರೂ ಸಹ ಈಗ ಅವರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ಆದಿನ ರಮ್ಜಾನ್ ನಿಮಿತ್ತ ರಾತ್ರಿ ಮಸೀದಿಗೆ ಹೋಗಿದ್ದೆ. ರಮ್ಜಾನ್ ಸಮಯದಲ್ಲಿ ಮಸೀದಿ 24 ಗಂಟೆ ಸಹ ತೆರೆದಿರುತ್ತದೆ. ನಾನು ಹೋಗಿದ್ದ ಮಸೀದಿ ಆರೋಪಿತರನ್ನು ನೋಡಿದ ಜಾಗೆಯಿಂದ ಸುಮಾರು 1 ವರೆ ಕಿ.ಮೀಗಳು. ನನ್ನ ಮನೆಯಿಂದ ಮಸೀದಿಗೆ ಸುಮಾರು 2 ಕಿ.ಮೀಗಳ ಅಂತರ. ಘಟನೆ ನಡೆದಿದೆ ಎಂಬ ಜಾಗೆಯಲ್ಲಿ ಸುಮಾರು 12 ಮನೆಗಳು ಇರುವಂತಹ ಕಾಂಪ್ಲೆಕ್ಸ ಕಟ್ಟಡ ಎಂದರೆ ನಿಜ. ಅದರ ಎದುರು ಸಮದ್ ಎನ್ನುವವರ ಮನೆ ಇದೆ ಎಂದರೆ ನಿಜ. ಅದರ ಪಕ್ಕದಲ್ಲಿ ಅಜ್ವಾ ಮಂಜಿಲ್ ಎಂಬ ಮನೆ ಇದೆ ಮತ್ತು ಅದರ ಪಕ್ಕದಲ್ಲಿ ಶ್ರೀಹರಿ ನಿಲಯ ಎಂಬ ಮನೆ ಇದೆ. ನಾನು ಹೋಗಿದ್ದ ಮಸೀದಿ ಘಟನೆ ನಡೆದ ಜಾಗೆಯಿಂದ ಉತ್ತರ ದಿಕ್ಕಿನಲ್ಲಿದೆ.

2) ಮಸೀದಿಯ ಕಾರ್ಯಕ್ರಮಗಳು 9-30 ಗಂಟೆಗೆ ಮುಗಿಯುತ್ತದೆ ಎಂದರೆ ನಿಜ. ಆದರೆ ರಮ್ಜಾನ್ ತಿಂಗಳಿನಲ್ಲಿ ಅದು ಬೆಳಗ್ಗಿನವರೆಗೆ ಇರುತ್ತದೆ. ಆದಿನ ನಾನು ಒಬ್ಬನೇ ಇದ್ದೆ. ಆದಿನ ನೋಡಿದ ವ್ಯಕ್ತಿಗಳು ಯಾವ ಬಣ್ಣದ ಬಟ್ಟೆಗಳನ್ನು ಹಾಕಿದ್ದರು ಎಂದು ಗೊತ್ತಿಲ್ಲ. 1 ನೇ ಆರೋಪಿ ಮತ್ತು ಮೃತನ ನಡುವೆ ಮಕ್ಕಳ ವಿಷಯವಾಗಿ ತಂಟೆಯಾಗಿತ್ತು ಎಂದು ನನಗೆ ಪೊಲೀಸರು ಹೇಳಿದ್ದರಿಂದ ಗೊತ್ತು. ನಾನು ಹೇಳಿದಂತಹ ಘಟನೆ ನಡೆದ ಜಾಗೆಯಲ್ಲಿ ಸಿಸಿ ಟಿವಿ ಕ್ಯಾಮರಾ ಇದೆ ಎಂದರೆ, ಆಗ ಇರಲಿಲ್ಲ, ಈಗ ಇದೆ.

3) ಈ ಕೇಸಿನ ವಿಷಯವಾಗಿ ನಾನು ಠಾಣೆಗೆ ಎರಡು ಬಾರಿ ಹೋಗಿದ್ದೇನೆ. ನನ್ನ ಮುಂದೆ ಯಾವುದೇ ಪೋಟೋ ತೆಗೆಯಲಿಲ್ಲ. ಈ ದೂರಿನಲ್ಲಿ ಹೇಳಿದ ವ್ಯಕ್ತಿ ಅಪಘಾತದಲ್ಲಿ ತೀರಿದ್ದರೂ ಪೊಲೀಸರ ಹೇಳಿಕೆ ಮೇರೆಗೆ ಹಲ್ಲೆಯಿಂದ ತೀರಿರುವುದಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಿನ ನನಗೆ ಸಂಶಯ ಇತ್ತು. ನಾನು ಯಾವುದೇ ಹೇಳಿಕೆ ಅಥವಾ ಮರುಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1 ರ ಸ್ಕೂಟರನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ